ಈಜಿಪ್ಟಿಗೆ ಹೋದಾಗ, ಪಿರಮಿಡ್ಡುಗಳಿರುವ ಹಳೇಕೈರೊ ಶಹರದಲ್ಲಿ ಕತ್ತೆಗಳು ಓಡಾಡುವುದನ್ನು ನೋಡಿದೆ. ಎಲಾ! ಜಗತ್ತಿನ ಅದ್ಭುತ ವಾಸ್ತುವಿಸ್ಮಯದ ಆಸುಪಾಸಲ್ಲಿ, ದೃಷ್ಟಿಬೊಟ್ಟಿನಂತೆ ಈ ಪ್ರಾಣಿ ಹ್ಯಾಗೆ ಬಂತು ಎಂದು ಚಕಿತವಾಯಿತು. ಬಳಿಕ ಹಳೇಕೈರೊದ ತುಂಬ ಜನ ಕತ್ತೆಸವಾರಿ ಮಾಡುವ ಮತ್ತು ಕತ್ತೆಬಂಡಿ ನಡೆಸುವ ದೃಶ್ಯಾವಳಿ ಗೋಚರಿಸಿತು. ನವಕೈರೊದಲ್ಲಿ ಪಾರ್ಲಿಮೆಂಟು, ಅಧ್ಯಕ್ಷ ನಿವಾಸ, ರಾಯಭಾರ ಕಚೇರಿ, ವಿಲಾಸಿಹೋಟೆಲು, ಪಾರ್ಕು, ವಿಶಾಲರಸ್ತೆ, ರೊಯ್ಯನೆ ಹರಿವ ಕಾರುಗಳಿದ್ದವು; ಹಳೇಕೈರೊದಲ್ಲಿ ಬಡತನ, ಕಸ–ಧೂಳು, ಡಬ್ಬಾ ಅಂಗಡಿಯ ಮುಂದೆ ಚಹ–ಸಿಗರೇಟು ಸೇವಿಸುವ ಜಂಗುಳಿ. ಇವಕ್ಕೆ ಕಿರೀಟವಿಟ್ಟಂತೆ ಕತ್ತೆಗಳು. ನಮ್ಮಲ್ಲೂ ಮಹಾನಗರಗಳ ಪ್ರತಿಷ್ಠಿತ ಭಾಗಗಳಲ್ಲಿ ಸೈಕಲ್‌ರಿಕ್ಷಾ ಎತ್ತಿನಬಂಡಿ ನಿಷೇಧಿಸಿರುವಂತೆ, ಹೊಸಕೈರೊದಲ್ಲಿ ಕತ್ತೆಗಳನ್ನು ನಿಷೇಧಿಸಲಾಗಿದೆ. ಅದು ಸರಿಯೇ. ಅಧಿಕಾರಸ್ಥರೂ ವಿಲಾಸಿಗಳೂ ಇರುವಲ್ಲಿ ಶ್ರಮಜೀವಿಗಳಿಗೆ ಏನು ಕೆಲಸ? ಒಂದಂತೂ ನಿಚ್ಚಳವಾಗಿತ್ತು–ನವಕೈರೊದಲ್ಲಿ ದಿಕ್ಕೆಟ್ಟು ಹರಿದಾಡುವ ಆತಂಕಭರಿತ ಜನರಿಗೆ ಹೋಲಿಸಿದರೆ, ಸ್ವಚ್ಛಂದಗತಿಯಲ್ಲಿ ಚಲಿಸುವ ಇಲ್ಲಿನ ಕತ್ತೆಸವಾರರ ಮುಖದ ಮೇಲೆ ನಿರಾಳತೆ ನೆಲೆಸಿತ್ತು. ವಾಹನದ ಸದ್ಗುಣಗಳು ಸವಾರರಿಗೆ ವರ್ಗಾವಣೆಯಾಗುವುದು ಸಹಜವೇ.

ಸೂಕ್ಷ್ಮವಾಗಿ ಗಮನಿಸಿದೆ: ನಮ್ಮಲ್ಲಿರುವಂತೆ ಹಳೇಕೈರೊದ ಕತ್ತೆಗಳು ಬಡಕಲಾಗಿರಲಿಲ್ಲ. ಅವಕ್ಕೆ ಬೆನ್ನಸರಕು ಬೀಳದಂತೆ ಬಿಗಿವ ಹಗ್ಗದಿಂದಾದ ತೊಡೆಗಾಯ ಇರಲಿಲ್ಲ. ಅವು ಸಾಲಿಮಕ್ಕಳು ಪೌಡರ್ ಮೆತ್ತಿಕೊಂಡಂತೆ ಬೂದಿಗುಂಡಿಯಲ್ಲಿ ಭಸ್ಮಸ್ನಾನವನ್ನೂ ಮಾಡಿರಲಿಲ್ಲ. ಬದಲಿಗೆ, ನೈಲ್ ಹೊಳೆಯ ಸಿಹಿನೀರನ್ನೀಂಟಿ, ದಡದಲ್ಲಿ ಬೆಳೆದ ಸಮೃದ್ಧ ಗರಿಕೆ ಮೆದ್ದು, ಸುಪುಷ್ಟವಾಗಿದ್ದವು. ಬೂದುವರ್ಣದ ಕಾಯ ಬಿಸಿಲಿಗೆ ಲಕಲಕಿಸುತ್ತಿತ್ತು. ನಸ್ಯಗಪ್ಪಿನ ಕತ್ತೆಗಳಿಗೆ ಮುಸುಡಿ ಭಾಗವಷ್ಟೆ ಬೆಳ್ಳಗಿದ್ದು, ಕಾರ್ಮೋಡದಲ್ಲಿ ಅವಿತ ಚಂದಿರ ತುಸುವೇ ಹೊರಗಿಣುಕಿದಂತೆ ಶೋಭಿಸುತ್ತಿತ್ತು. ಬಟ್ಟಲಗಣ್ಣು, ಬ್ರಶ್ಶುಗಳನ್ನು ಜೋಡಿಸಿದಂತೆ ನಿಮಿರಿದ ಕುತ್ತಿಗೆಯ ನವಿರು, ನಾಗವೇಣಿಯರ ಜಡೆಯಂತಿರುವ ಕುಚ್ಚಿನ ಬಾಲ–ಎಲ್ಲವೂ ಮೋಹಕ. ಇಂತಹ ಸರ್ವಾಂಗ ಸುಂದರ ಕಾಲ್ನಡೆಯನ್ನು ಟೈರುಚಕ್ರದ ಬಂಡಿಗೆ ಹೂಡಿ ಸರಕು

